(ಇಂದು ದಿನಾಂಕ 26.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು:- ಎದುರುದಾರರ ಪರ ವಕೀಲರಿಂದ:-**

ನಾನು ನನ್ನ ಹೆಂಡತಿಯ ಮನೆಯಲ್ಲಿ ಹುಟ್ಟುಹಬ್ಬಕ್ಕೆ ಹೋಗಿ ಎಷ್ಟು ದಿನ ಇದ್ದೆ ಎಂದು ನನಗೆ ನೆನಪಿಲ್ಲ. ನವೆಂಬರ್ 3 ರಂದು ನಾನು ನನ್ನ ಹೆಂಡತಿಯೊಂದಿಗೆ ಮದುವೆಗೆ ಹೋಗಿಲ್ಲ. ನಾನು ಪಾಸ್ಟರ್ ಮದುವೆಗೆ ಹೋಗಿದ್ದೆ. ಮದುವೆಗೆ ಹೋಗಿ ಆ ದಿನವೇ ಹಿಂತಿರುಗಿ ಬಂದಿರುತ್ತೇನೆ. ನನಗೆ ತೋರಿಸುತ್ತಿರುವ ಭಾವಚಿತ್ರಗಳು ನಾನು ನನ್ನ ಹೆಂಡತಿ ಮಕ್ಕಳು ಜೊತೆಯಲ್ಲಿ ಇರುವಂತಹವು ಅವುಗಳನ್ನು **ನಿಆರ್ 1 ರಿಂದ 3** ಎಂದು ಗುರುತಿಸಲಾಯಿತು. ಸಾಲವನ್ನು ನಾನು ಹಿಂದಿನ ವರ್ಷ ಪಡೆದಿರುತತೇನೆ. ಸಾಲದ ಅರ್ಜಿಗೆ ನನ್ನ ಹೆಂಡತಿಯ ಸಹಿಯನ್ನು ಸಹ ಪಡೆದಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ಅರ್ಜಿ ಅದು ಸಾಲದ ಅರ್ಜಿ ಸದರಿ ದಾಖಲೆಯನ್ನು **ನಿಆರ್ 4** ಎಂದು ಗುರುತಿಸಲಾಯಿತು. ಬೆಂಗಳೂರಿನಲ್ಲಿ ಕೌಟುಂಬಿಕ ಕಲಹದ ಅಡಿಯಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆ ಯಾರು ಬರೆದರೋ ನನಗೆ ಗೊತ್ತಿಲ್ಲ, ಈಗ ನನಗೆ ತೋರಿಸುತ್ತಿರುವ ಚೆಕ್ಕಿನ ಭಾವಚಿತ್ರ ನನಗೆ ಸೇರಿದ್ದು. ಸದರಿ ಚೆಕ್ಕನ್ನು ನಾನು ಶ್ಯಾಮಲಾಗೆ ನೀಡಿದ್ದೇನೆ. ಸದರಿ ಚೆಕ್ಕಿನ ಭಾವಚಿತ್ರವನ್ನು ನಿಆರ್ 5 ಎಂದು ಗುರುತಿಸಲಾಯಿತು.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.